ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ESTD-1964 (ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

**ಊಟಿ ರಸ್ತೆ, ಮೈಸೂರು - 570 025**

☎: 0821-2548236 & 2548380 Fax: 0821-2548238 E-mail: jssautonomous@gmail.com www. jsscacs.edu.in

**ದಿನಾಂಕ: 26.09.2017**

**ಪ್ರಕಟಣೆಯ ಕೃಪೆಗಾಗಿ**

**"ಭಾವಾಭಿವ್ಯಕ್ತಿಯ ಸೊಗಸಿನಿಂದ ತುಂಬಿದ ಕವನಗಳು"**

–ಶ್ರೀಮತಿ ಕೆ.ಎನ್. ರಾಣಿ

ದಿನಾಂಕ ೨೬.೦೯.೨೦೧೭ ರಂದು ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಸಾಹಿತ್ಯ ವೇದಿಕೆಯ ಅಡಿಯಲ್ಲಿ 'ದಸರಾ ವಿದ್ಯಾರ್ಥಿ ಕವಿಗೋಷ್ಠಿ'ಯನ್ನು ಏರ್ಪಡಿಸಲಾಗಿತ್ತು. ಜೆಎಸ್‌ಎಸ್ ಕಾಲೇಜಿನ ಪದವಿ ಮತ್ತು ಸ್ನಾತಕೋತ್ತರ ಪದವಿಯ ಒಟ್ಟು ೨೩ ವಿದ್ಯಾರ್ಥಿಗಳು ವಾಚಿಸಿದ ಸ್ವರಚಿತ ಕವನಗಳು ಸಹೃದಯರ ಮೆಚ್ಚುಗೆಯನ್ನು ಪಡೆದವು. ಕನ್ನಡಾಭಿಮಾನ, ತಾಯಿಯ ಪ್ರೀತಿ, ಗುರುವಿನ ಸ್ಮರಣೆಯಂತಹ ವಸ್ತುವಿಷಯವನ್ನು ಒಳಗೊಂಡಂತೆ, ಭ್ರಷ್ಟಾಚಾರ, ಹೆಣ್ಣು – ಎಂಬ ಶೀರ್ಷಿಕೆಯ ವಿವಿಧ ವಸ್ತು ವಿಷಯಗಳನ್ನು ಒಳಗೊಂಡ ಸಾಮಾಜಿಕ ಕಾಳಜಿಯನ್ನು ಹೊಂದಿದ್ದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯನಿಯರ ಸುಮಾರು ೪೦ ಸ್ವರಚಿತ ಕವನಗಳು ವಾಚಿಸಲ್ಪಟ್ಟವು.

ಕವಿಗೋಷ್ಠಿಯನ್ನು ಕಾಲೇಜಿನ ಮುಖ್ಯಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ.ಸಾಂಬಶಿವಯ್ಯನವರು ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ. ಮಹದೇವಪ್ಪನವರು ಮತ್ತು ಕನ್ನಡ ಸ್ನಾತಕೋತ್ತರ ವಿಭಾಗದ ಸಂಯೋಜಕರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಟರಾಜ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಕೆ.ಎನ್. ರಾಣಿಯವರು ವಿದ್ಯಾರ್ಥಿಯ ಕಾವ್ಯಪ್ರತಿಭೆಯನ್ನು ಶ್ಲಾಘಿಸಿ – "ಕಾವ್ಯದ ಭಾಷೆಯಲ್ಲಿ ವಿದ್ಯಾರ್ಥಿಗಳ ಪ್ರಭುತ್ವ ಮೆಚ್ಚುವಂತದ್ದು. ಪಂಪನ ಕಾಲದಿಂದ ಕುಮಾರವ್ಯಾಸನವರೆಗೂ ಕಾವ್ಯದ ಭಾಷೆಯಲ್ಲಿ ಭಿನ್ನತೆ ಕಂಡಬಂದರೂ ಭಾವಾಭಿವ್ಯಕ್ತಿಯಲ್ಲಿನ ಸೊಗಸನ್ನು ಮನಗಾಣಬೇಕು. ಈ ಭಾವಾಭಿವ್ಯಕ್ತಿಯ ಸೊಗಸು ವಾಚಿಸಿದ ಎಲ್ಲಾ ಕವನಗಳಲ್ಲಿ ಇದೆ" ಎಂದರು.

ಕಾರ್ಯಕ್ರಮವನ್ನು ವಿದ್ಯಾರ್ಥಿಗಳಾದ ನಂದಿನಿ ಮತ್ತು ತಂಡದವರ ಪ್ರಾರ್ಥನೆಯೊಂದಿಗೆ ಆರಂಭಿಸಿ, ಗಿರೀಶ್ ಎಲ್ಲರನ್ನು ಸ್ವಾಗತಿಸಿದರು; ಮಧುಸೂದನ್ ವಂದಿಸಿದರು; ವಿನಯಶ್ರೀ ಕಾರ್ಯಕ್ರಮವನ್ನು ನಿರೂಪಿಸಿದರು.

ಗೆ,

ಸಂಪಾದಕರು

____________________

____________________

(ಪ್ರೊ. ಎಂ. ಮಹದೇವಪ್ಪ)
ಪ್ರಾಂಶುಪಾಲರು